606476

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1162
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 23-12-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಜಿ.ಎಸ್.ಟಿ ತೆರಿಗೆ ಸಂಗ್ರಹದಲ್ಲಿ ತೀವ್ರ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ನಿರ್ಲಕ್ಷತೆಯಿಂದ ಜಿ.ಎಸ್.ಟಿ .ತೆರಿಗೆ ಸಂಗ್ರಹದಲ್ಲಿ ಕುಂಠಿತವಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ, ವಾಣಿಜ್ಯ ತೆರಿಗೆ ಇಲಾಖೆಯು ಪರಿಣಾಮಕಾರಿಯಾಗಿ ತೆರಿಗೆ ಸಂಗ್ರಹಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	1. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಡಿಮೆ ತೆರಿಗೆ ಸಂಗ್ರಹಣೆ ಇರುವ ವಿಭಾಗ/ಸ್ಥಳಗಳಿಂದ ಹುದ್ದೆಗಳನ್ನು ಹೆಚ್ಚಿನ ವಾಣಿಜ್ಯ ಚಟುವಟಿಕೆ ಹೊಂದಿರುವ ಹಾಗೂ ಹೆಚ್ಚಿನ ತೆರಿಗೆ ಸಂಗ್ರಹಣೆಗೆ ಅವಕಾಶವಿರುವ ವಿಭಾಗ/ಸ್ಥಳಗಳಿಗೆ ಸ್ಥಳಾಂತರಿಸಲಾಗಿರುತ್ತದೆ. ಇದು ಹುದ್ದೆಗಳ ಹೊಸ ಸೃಷ್ಟಿ ಇಲ್ಲದೇನೆ, ಇರುವ ಹುದ್ದೆಗಳ ಪರಿಣಾಮಕಾರಿ ಬಳಕೆಯತ್ತ ಕ್ರಮವಾಗಿರುತ್ತದೆ. 2. ವಾಣಿಜ್ಯ ತೆರಿಗೆ ಇಲಾಖೆಯ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಲ್ಲಿ ಹಾಗೂ ಉಪ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಲ್ಲಿ ಕಾರ್ಯ ನಿರ್ಹಿಸುತ್ತಿರುವ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರುಗಳಿಗೆ ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ, ಹೆಚ್ಚುವರಿ ತೆರಿಗೆ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕರನಿರ್ಧರಣೆಯ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಡಿಸೆಂಬರ್ 2021 ರಿಂದ ನೀಡಲಾಗಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ವಿವಿಧ ಮೂಲಗಳ ವಾಣಿಜ್ಯ ತೆರಿಗೆ ಎಷ್ಟು;	ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿದ ತೆರಿಗೆಯ ವಿವರ. (ರೂ ಕೋಟಿಗಳಲ್ಲಿ)

	(ವರ್ಷವಾರು ಮಾಹಿತಿ ಒದಗಿಸುವುದು)	2018-19 ರೂ. 67,869 2019-20 ರೂ. 74,281 2020-21 ರೂ. 82,462
ಈ)	ತೆರಿಗೆ ವಂಚಿಸುತ್ತಿರುವ ಅನೇಕ ಗುತ್ತಿಗೆದಾರರಿಂದ ಜಿ.ಎಸ್.ಟಿ. ತೆರಿಗೆಯನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳೇನು? (ವಿವರ ನೀಡುವುದು)	ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಗುತ್ತಿಗೆದಾರರಿಂದ ಅವರಿಗೆ ಹಣ ಸಂದಾಯ ಮಾಡುವ ಇಲಾಖೆಯವರೇ ತೆರಿಗೆಯನ್ನು ಮೂಲದಿಂದ ಕಡಿತಗೊಳಿಸುತ್ತಾರೆ. ತದನಂತರ ತೆರಿಗೆಯನ್ನು ಮೂಲದಿಂದ ಕಡಿತಗೊಳಿಸಿದ ಇಲಾಖೆಯವರು ಸಲ್ಲಿಸುವ ಜಿಎಸ್‌ಟಿಆರ್-7 ನಮೂನೆಯನ್ನು ಗುತ್ತಿಗೆದಾರರು ಸಲ್ಲಿಸುವ ನಮೂನೆ ಜಿಎಸ್‌ಟಿಆರ್-3ಬಿಯಲ್ಲಿ ಘೋಷಿಸುವ ತೆರಿಗೆದಾಯಕ ವಹಿವಾಟು, ಪಾವತಿಸಿದ ತೆರಿಗೆ ಇತ್ಯಾದಿಗಳೊಂದಿಗೆ ಪರಿಶೀಲಿಸಿ ನ್ಯೂನತೆಗಳಿದ್ದಲ್ಲಿ ಕಾನೂನಿನ್ವಯ ಕ್ರಮ ಕೈಗೊಳ್ಳಲಾಗುತ್ತದೆ. ಇನ್ನುಳಿದಂತೆ ಸರ್ಕಾರಿ ಗುತ್ತಿಗೆದಾರರಲ್ಲದ ನೋಂದಾಯಿತ ಗುತ್ತಿಗೆದಾರರಿಗೆ ಸಂಬಂಧಿಸಿದಂತೆ ಹಲವು ಆಕರಗಳಿಂದ ಒದಗುವ ಮಾಹಿತಿಗಳನ್ನು ಪರಿಶೀಲಿಸಿ ಸೂಕ್ತವೆನಿಸುವ ಪ್ರಕರಣಗಳಲ್ಲಿ ಜಾರಿ ವಿಭಾಗದಿಂದ ತಪಾಸಣೆ ನಡೆಸುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಆಇ 100 ಸಿಎಸ್‌ಎಲ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ